

ನೆಪದಿಂದ ಸ್ನೇಹಿತೆಯರು ಜೊತೆ ಸೇರಿ, 'ಎರಡು ದಿನ ನಮ್ಮನೇಲಿ ಇದ್ದು ಹೋಗ್ಬೇಕು ನೀನು...' ಒತ್ತಾಯಿಸಿದ್ದಳು ಮಮತಾ, ಬೆಂಗಳೂರಿಗೆ ಬಂದಿದ್ದ ಗೆಳತಿಯನ್ನು.

ಇಬ್ಬರೂ ಒಂದೇ ಊರಿನವರು. ಪ್ರೈಮರಿಯಿಂದ ಡಿಗ್ರಿ ಮುಗಿಯುವವರೆಗೆ ಒಟ್ಟಾಗಿ ಓದಿದವರು. ಮದುವೆಯಾಗಿ ಗಂಡನ ಮನೆ ಸೇರಿಕೊಂಡ ಮೇಲೆ ಇಬ್ಬರಲ್ಲೂ ಸಂಪರ್ಕ ಬಿಟ್ಟು ಹೋಗಿತ್ತು. ಫೋನ್ ಮಾಡಿ ಮಾತಾಡಿಕೊಳ್ಳುವ ಸವಲತ್ತು ಇರಲಿಲ್ಲ ಅಂತಲ್ಲ. ಆದರೆ ಅದ್ಯಾಕೋ ಆ ಬಗ್ಗೆ ಇಬ್ಬರೂ ಆಸಕ್ತಿ ವಹಿಸಿರಲಿಲ್ಲ. ಮೂರು ಮೂರು ವರ್ಷಕ್ಕೆ ವರ್ಗಾವಣೆಯಾಗುವ ಬ್ಯಾಂಕಿನ ಅಧಿಕಾರಿ ಮಮತನ ಗಂಡ. ಒಂದೇ ಊರಲ್ಲಿ ನೆಲೆ ಕಂಡುಕೊಂಡಿರುವವನು ನಳಿನಿಯ ಗಂಡ. ಅದು ಯಾಕೆ ಹಾಗಾಗುವುದೋ ಗೊತ್ತಿಲ್ಲ, ತೀರಾ ಹತ್ತಿರದ ಬಂಧುಗಳ ಬಳಿಯೂ ಯೋಗಕ್ಷೇಮದ ನಾಲ್ಕು ಮಾತಾಡುವುದಕ್ಕೆ ಚೌಕಾಶಿ ಮಾಡಿ ಎಷ್ಟೋ ಅಷ್ಟರಲ್ಲಿದ್ದುಬಿಡುವುದು ಹೆಚ್ಚಿನವರ ಮನೋಧರ್ಮ. ಮದುವೆ, ಮುಂಜಿ, ಮನೆಒಕ್ಕಲಿನಂತಾ ಹೆಚ್ಚುಕಟ್ಲೆ ಆದರೆ, ಅವರ ಆಹ್ವಾನ ಮನ್ನಿಸಿ ಅಲ್ಲಿಗೆ ಹೋದರೆ, ಒಬ್ಬರಿನ್ನೊಬ್ಬರ ಭೇಟಿ. 'ನೋಡಿ ಎಷ್ಟೊರ್ಷ ಆಗಿತ್ತಲ್ವಾ?' ಎನ್ನುವ ಬಾಯುಪಚಾರ.

ಮೊಬೈಲ್ ಅನ್ನುವುದು ಎಲ್ಲರ ಅಂಗೈಯಲ್ಲಾಡುವ ಅರಗಿಳಿ ಆದ ಮೇಲೆ ಕಳಚಿದ ಎಷ್ಟೋ ಕೊಂಡಿಗಳು ಮತ್ತೆ ಬೆಸುಗೆ ಹಾಕಲ್ಪಟ್ಟು, ಇವರದ್ದೂ ಒಂದು ವಾಟ್ಸಾಪ್ ಗ್ರೂಪನ್ನು ಹುಟ್ಟುಹಾಕಿದ್ದಳು ಒಬ್ಬ ಸಹಪಾಠಿ. ಯಾರುಯಾರದೋ ನಂಬರನ್ನು ಯಾರುಯಾರಿಂದಲೋ ಪಡೆದು ಒಟ್ಟಿಗೆ ಡಿಗ್ರಿ ಮುಗಿಸಿದವರ ಒಂದು ಗುಂಪು ರಚನೆಯಾಗಿತ್ತು. ಅವರ ಸುದ್ದಿ ಇವರಿಗೆ, ಇವರ ಸುದ್ದಿ ಅವರಿಗೆ ಗೊತ್ತಾಗುವಾಗ ಒಳಗಿಂದೊಳಗೆ ಕೊಂಚ ಅಚ್ಚರಿ. ಕೊಂಚ ಮತ್ಸರ. ಹೆಚ್ಚು ಪ್ರಚಾರ ಕೊಟ್ಟುಕೊಳ್ಳುವ ಸುದ್ದಿ ಅಹಂ ಅನ್ನು ಪೋಷಿಸುವಂತಾದ್ದಕ್ಕೇ ಎನ್ನುವುದು ಎಲ್ಲರಿಗೂ ಗೊತ್ತಿದೆ. ಹಾಗಿದ್ದರೂ ಅವರ ಕುರಿತು ಅಗತ್ಯಕ್ಕಿಂತಾ ಹೆಚ್ಚು ಮೆಚ್ಚುಗೆ, ಅಗತ್ಯಕ್ಕಿಂತಾ ಹೆಚ್ಚು ಅಭಿಮಾನದ ತೋರ್ಪಡಿಕೆ. ಅದೊಂದು ಸೌಜನ್ಯದ ನಡವಳಿಕೆ ಅನ್ನುವ ಭಾವನೆ. ಕೆಲವರು ಗುಂಪಿನಲ್ಲಿ ಸದಾ ಸಕ್ರಿಯರಾಗಿದ್ದರೆ, ನಿರ್ಲಿಪ್ತವಾಗಿರುವ ನಳಿನಿಯಂಥವರ ಸಂಖ್ಯೆಯೂ ಇದ್ದೇ ಇತ್ತು. ವಾಸ್ತವವಾಗಿ ನಳಿನಿ ಗೆಳತಿಯ ಮಗಳ ಮದುವೆಗೆ ಬರುವ ಉದ್ದೇಶ ಹೊಂದಿದವಳೇನಲ್ಲ. ಆದರೆ ಈ ಮದುವೆಗೆ ಹೋದರೆ ಹಳೆಯ ಸಹಪಾಠಿಗಳನ್ನು ನೋಡಬಹುದು, ಆ ವಯಸ್ಸಿನ ಸವಿನೆನಪುಗಳನ್ನು ನೇವರಿಸಿ ಸುಖಿಸಬಹುದು ಎನ್ನುವುದು ಮಾತ್ರ ಅಲ್ಲ, ಅಲ್ಲಿ ಒಂದು ಕಾಲದ ಅತ್ಯಾಪ್ತೆಯ ಭೇಟಿಯಾಗಬಹುದು ಎನ್ನುವ ಉಮೇದು ಅವಳನ್ನು ಈ ಪ್ರಯಾಣಕ್ಕೆ ಪ್ರೇರೇಪಿಸಿತ್ತು. ಅದೆಷ್ಟೋ ವರ್ಷಗಳ ನಂತರ ಫೋನ್ ಮಾಡಿ ಮಾತಾಡಿದ್ದಳು ಮಮತಾ, ಹಿಂದಿನ ಅದೇ ಪ್ರೀತಿ ಜಿನುಗುವ ದನಿಯಲ್ಲಿ,

'ಮದುವೆಗೆ ಖಂಡಿತಾ ಬರ್ಬೇಕು ನೀನು. ನಮ್ಮನೇಲೇ ಇರ್ಬೇಕು. ಬಸ್ ಸ್ಟ್ಯಾಂಡಿಗೆ ನಾವೇ ಬಂದು ಕರ್ಕೊಂಡ್ಬರ್ತೀವಿ'.

'ನೋಡೋಣ ಕಣೇ...' ಅನ್ನಬೇಕಿದ್ದವಳು ಹೂಂಗುಟ್ಟಿ, ದಿನಗಳು ಕಳೆದು ಮದುವೆಗೆ ಹೊರಡುವ ದಿನ ಹತ್ತಿರ ಬಂದಂತೆಲ್ಲಾ ಮನದೊಳಗೆ ಉಕ್ಕುಕ್ಕಿ ಬರುತ್ತಿರುವ ಹೆಸರರಿಯದ ಯಾವುದೋ ಉಲ್ಲಸಿತ ಭಾವ. 'ಬೇಡ' ಅಂದಿರಲಿಲ್ಲ ಗಂಡ. ಬಸ್ಸು ಹತ್ತಿಸಿ ಬೀಳ್ಕೊಟ್ಟಿದ್ದ ಮತ್ತು ಹೇಳಿದಂತೆ ಬಸ್ ಸ್ಟ್ಯಾಂಡಿನಲ್ಲಿ ಕಾದಿದ್ದಳು ಮಮತಾ.

***

ಮೊದಲಿಂದ ಈ ಗೆಳತಿಯರು ಇದ್ದಿದ್ದು ಹಾಗೇ. ಒಬ್ಬರ ಮನಸ್ಸಿನಲ್ಲಿದ್ದುದನ್ನು ಇನ್ನೊಬ್ಬರ ಬಳಿ ಹೇಳಿಕೊಳ್ಳಲು ಯಾವ ಮುಜುಗರದ, ಹಿಂಜರಿಕೆಯ ಅಡ್ಡಗೋಡೆ ಇರಲಿಲ್ಲ. ಇದು ಹೇಳಬೇಕು, ಅದು ಹೇಳಬಾರದು ಎನ್ನುವ ತಾರತಮ್ಯ ಇಲ್ಲ. ಇಷ್ಟು ವರ್ಷ ತಾವು ಪರಸ್ಪರ ಭೇಟಿಯಾಗಿರಲಿಲ್ಲ ಎನ್ನುವುದು ಮರೆತೇ ಹೋಗಿ ಕಾಲ ಹಿಮ್ಮುಖವಾಗಿ ಚಲಿಸಿದಂತೆ, ಇಬ್ಬರೂ ಹಿಂದಿನ ಅದೇ ಭಾವವನ್ನು ಆವಾಹಿಸಿಕೊಂಡವರಂತೆ ಮಾತಾಡಿದ್ದೇ ಆಡಿದ್ದು. ತಂತಮ್ಮ ಬದುಕಿನ ಏಳುಬೀಳುಗಳನ್ನು ಮುಕ್ತವಾಗಿ ಹಂಚಿಕೊಂಡಿದ್ದರು ಇಬ್ಬರೂ. ಇಂತಹ ಒಂದು ಸಂದರ್ಭದಲ್ಲಿ ಹೆಣ್ಣು ಗಂಡುಮಕ್ಕಳ ಕುರಿತಾದ ಚರ್ಚೆಯೊಂದು ಇಬ್ಬರ ನಡುವೆ ಅನುದ್ದೇಶಪೂರ್ವಕವಾಗಿ ಆರಂಭವಾಗಿ ಮಾತು ಎಲ್ಲಿಂದ ಎಲ್ಲಿಗೋ ಹೊರಳಿತ್ತು. ಮತ್ತು ತಾನು ನಂಬಿಕೊಂಡಿದ್ದ ಯಾವುದೋ ಸತ್ಯವನ್ನು ಅದೇ ಪರಮಸತ್ಯ ಎನ್ನುವಂತೆ ಗೆಳತಿಯ ಎದುರು ವಾದಿಸಹೊರಟಿದ್ದಳು ನಳಿನಿ.

ಸುಖಾಸುಮ್ಮನೆ ಹೀಗೆ ಮೊಂಡು ವಾದ ಹೂಡುವವಳಲ್ಲ ಗೆಳತಿ ಎಂದು ಮಮತನಿಗೆ ಗೊತ್ತಿದೆ. ಒಳಗುಟ್ಟು ಏನೋ ಇದೆ ಎಂದು ಅರ್ಥೈಸಿಕೊಂಡ ಅವಳು 'ಹೇಳುವಂಥದ್ದಾದರೆ ಅವಳೇ ಹೇಳುತ್ತಾಳೆ' ಎಂದುಕೊಂಡು ಮಾತನ್ನು ಬೇರೆ ದಿಕ್ಕಿಗೆ ಹೊರಳಿಸಲು ಯತ್ನಿಸಿದರೂ ನಳಿನಿ ಇನ್ನೂ ಅದೇ ಗುಂಗಿನಲ್ಲಿದ್ದಾಳೆ ಎನ್ನುವುದು ಅವಳಿಗೆ ಸ್ಪಷ್ಟವಾಗಿ ಅರಿವಾಗಿತ್ತು. 'ಸ್ವಲ್ಪ ಹೊತ್ತು ಅವಳನ್ನು ಅವಳಷ್ಟಕ್ಕೆ ಬಿಟ್ಟು ಬಿಡುವುದು ಒಳ್ಳೆಯದು' ಎಂದುಕೊಂಡ ಮಮತಾ ಕಾಫಿ ಮಾಡಿ ತರುವ ನೆಪದಲ್ಲಿ ಒಳಗೆ ಎದ್ದು ಹೋದಳು. ನಡುಮಧ್ಯಾಹ್ನ ಸಮೀಪಿಸುತ್ತಿರುವ ಹೊತ್ತು. ಮನೆಯಲ್ಲಿ ಇವರನ್ನು ಹೊರತುಪಡಿಸಿ ಮತ್ತೆ ಯಾರಿಲ್ಲ. ರಾತ್ರಿಯ ಬಸ್ಸಿಗೆ ವಾಪಸು ಹೊರಡುವವಳಿದ್ದಾಳೆ ನಳಿನಿ. ಇನ್ನು ಮುಂದೆ ಪರಸ್ಪರ ಸಂಪರ್ಕವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇಬ್ಬರೂ ಮಾತಾಡಿಕೊಂಡಿದ್ದಾಗಿದೆ. ವರ್ಷಕ್ಕೊಮ್ಮೆಯಾದರೂ ಭೇಟಿಯಾಗುವ ಕುರಿತೂ...

ಎರಡು ಕಪ್ ಸ್ಟ್ರಾಂಗ್ ಕಾಫಿ ಮಾಡಿ ಗೆಳತಿಗೊಂದು ಕೊಟ್ಟು ತಾನೊಂದನ್ನು ಕೈಗೆ ತೆಗೆದುಕೊಂಡ ಮಮತಾ ಗೆಳತಿಯ ಮುಖ ನೋಡಿ 'ಮತ್ತೆ...' ಎಂದೇನೋ ಶುರು ಮಾಡಲಿದ್ದವಳು ನಳಿನಿಯ ಕಣ್ಣಂಚಿನಲ್ಲಿ ಜಿನುಗುತ್ತಿದ್ದ ಹನಿ ನೋಡಿ ಅಪ್ರತಿಭಳಾದಳು. ಏನಾಯ್ತು ಇವಳಿಗೆ? 'ಅಳ್ತಿದೀಯನೇ?' ಎಂದು ನಳಿನಿಯ ಕೈ ಅದುಮಿ ಕೇಳಿದಳು ಆಪ್ತ ಗೆಳತಿ. 'ಇಲ್ಲ' ಎನ್ನುವಂತೆ ತಲೆ ಅಲುಗಿಸುವಾಗ ಅವಳ ಕಣ್ಣು ತುಂಬಿದ್ದ ಹನಿಗಳು ಕೆನ್ನೆಯ ಮೇಲೆ ಜಾರಿದುವು. ನಿಧಾನಕ್ಕೆ ಬಿಚ್ಚಿಕೊಂಡಿತು ಬಿಸಿತುಪ್ಪದಂತಾ ಒಂದು ಸಂಕಟ. ಮೂಕವ್ಯಥೆ...

***

'ಮೇಲ್ನೋಟಕ್ಕೆ ಸುಖವಾಗಿರೋ ಹಾಗೆ, ಸಂತೋಷವಾಗಿರೋ ಹಾಗೆ ಕಾಣುವ ಅದೆಷ್ಟೋ ಸಂಸಾರಗಳು ನಿಜಕ್ಕೂ ಹಾಗಿರದೆ ಒಳಗುಟ್ಟು ಬೇರೇದೇ ಇರುತ್ತೆ ಅನ್ನೋದು ಜೀವನದ ವ್ಯಂಗ್ಯ ಕಣೇ. ಅತ್ತ ಬೇಡ ಎಂದು ಕಡಿದುಕೊಳ್ಳಲು ಬರದಂತಾ, ಇತ್ತ ಬೇಕೆಂದು ಹಚ್ಚಿಕೊಳ್ಳಲು ಸಾಧ್ಯವಾಗದಂತಾ ಒಂದು ತ್ರಿಶಂಕು ಸ್ಥಿತಿ ಅದು. ಇದರ ಹಿಂದಿರೋ ಕಾರಣಗಳು ನೂರಾರು, ಅಲ್ಲಲ್ಲ, ಸಾವಿರಾರು, ಅದೂ ಅಲ್ಲ, ಒಬ್ಬೊಬ್ಬರ ಅನುಭವ ಕೇವಲ ಅವರದ್ದು. ಈ ಕಾರಣಗಳ ಹಿಂಜರಿಕೆ ಇರದೆ, ಭೀತಿ ಇರದೆ, ಸ್ವತಂತ್ರ ಬದುಕು ಕಟ್ಟಿಕೊಳ್ಳೋ ಸಾಧ್ಯತೆ ಇದ್ದರೆ ನೂರಕ್ಕೆ ತೊಂಬತ್ತು ಜನ ವಿಚ್ಛೇದನ ಪಡ್ಕೊತಿದ್ರೇನೋ' ಎನ್ನುತ್ತಾ ಅಷ್ಟಕ್ಕೆ ನಿಲ್ಲಿಸಿ ಒಂದು ಗುಟುಕು ಕಾಫಿ ಹೀರಿದಳು ನಳಿನಿ.